
SERVICE ABOVE SELF



Rotary

विश्वमित्रः

ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –18 ದಿನಾಂಕ : 14–11–2024

## ದಿನಾಂಕ: 14.11.2024 ರ ವಾರದ ಸಭೆಯ ವರದಿ

**ದಿನಾಂಕ: 14.11.2024 ರ ಸಂಜೆ 6.45 ಕ್ಕೆ ರೋಟರಿ ಯುವಕೇಂದ್ರದ ಸಭಾಂಗಣದಲ್ಲಿ ವಾರದ ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ನಮ್ಮ ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷರು ಹಾಗೂ ಈ ಸಾಲಿನ ಕಾರ್ಯಕ್ರಮ ಸಮಿತಿ ಚೇರಮನ್‌ರಾದ ರೊ.ಎನ್. ವಿ.ಭಟ್‌ರವರು ಆಗಮಿಸಿ ಪಿಪಿಟಿ ಪ್ರೆಸೆಂಟೇಶನ್ ಮೂಲಕ ಚಾರ್‌ಧಾಮ್‌ಯಾತ್ರೆಯ ವಿವರಗಳನ್ನು ತಿಳಿಸಿದರು. ರೊ. ಕೆ.ಸೂರ್ಯನಾರಾಯಣ ಉಡುಪರು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.**

ಆರಂಭದಲ್ಲಿ ರೊ.ಭಾರ್ಗವಿ ಭಟ್‌ರವರಿಂದ "ಗಜವದನಾ ಬೇಡುವೆ" ಗೀತೆಯ ಮುಖಾಂತರ ಪ್ರಾರ್ಥನೆಯಾಯಿತು. ಅಧ್ಯಕ್ಷರಾದ ಕೆ. ಸೂರ್ಯನಾರಾಯಣ ಉಡುಪರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಕ್ಲಬ್‌ನ ಕಾರ್ಯಚಟುವಟಿಕೆಗಳ ವರದಿ ನೀಡಿದರು. ರೊ. ಡಾ. ಗಿರೀಶ್‌ಕುಮಾರ್ ಮತ್ತು ರೊ.ಶೋಭಾರವರು ತಮ್ಮ ಆಸ್ಪತ್ರೆಯಲ್ಲಿ ನೂತನವಾಗಿ ಏಓಸಿ ರೋಬೋಕೇರ್ ಯುನಿಟ್ ಸ್ಥಾಪಿಸುತ್ತಿರುವುದರ ಬಗ್ಗೆ ಆಹ್ವಾನ ಪ್ರತಿಕೆ ನೀಡಿದರು. ಕ್ಲಬ್‌ನ ಮಾಜಿ ಅಧ್ಯಕ್ಷ ರೊ.ಡಿ.ಎಲ್. ಮಂಜುನಾಥರವರು ರೋಟರಿ ಫೌಂಡೇಷನ್ ಬಗ್ಗೆ, ಅದರ ವಿಸ್ತಾರ, ಸೇವೆ ಬಗ್ಗೆ ಉದಾಹರಣೆ ಸಹಿತವಾಗಿ ಮಾತನಾಡಿ ನಾವು ದೇಣಿಗೆ ನೀಡಿರುವುದು ನಮ್ಮ ಕ್ಲಬ್‌ಗೆ ಪುನಃ ದೊಡ್ಡಮಟ್ಟದಲ್ಲಿ ಹೇಗೆ ಸಮಾಜ ಸೇವೆಗೆ ಅವಕಾಶ ಲಭ್ಯವಾಗುವುದರ ಬಗ್ಗೆ ತಿಳಿಸಿದರು. ರೋಟರಿ ಫೌಂಡೇಷನ್‌ಗೆ ರೋಟರಿ ಸದಸ್ಯರಲ್ಲದವರೂ ದೇಣಿಗೆ ನೀಡಬಹುದು ಅಂಥವರಿಗೂ ಪ್ರೇರಣೆ ಕೊಡಬಹುದು ಎಂದರು. ಮಹಿಳಾ ಸದಸ್ಯರೂ ಸಹ ದೇಣಿಗೆ ನೀಡಬಹುದು ಎಂದರು. ಗೌತಮ ಪುರದ ಶಾಲೆಯೊಂದಕ್ಕೆ ಗ್ರಾಂಟ್ ಬಂದಿರುವುದರ ಬಗ್ಗೆ ತಿಳಿಸಿದರು. ದಿನಾಂಕ; 24.11.2024 ರಂದು ಶ್ರೀ ರಾಘವೇಂದ್ರ ಸ್ವಾಮಿಗಳ ಜನ್ಮ ಸ್ಥಳ ತಮಿಳುನಾಡಿನ ಭುವನಗಿರಿಯಿಂದ ತಮ್ಮ ಶರಣ್ಯ ಆಸ್ಪತ್ರೆಗೆ ಶ್ರೀ ಶ್ರೀರಾಘವೇಂದ್ರ ಸ್ವಾಮಿಗಳ ಪಾದುಕೆ ಬರುತ್ತಿರುವುದರ ಬಗ್ಗೆ ತಿಳಿಸಿ ಅಂದು ನಡೆಯಲಿರುವ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಳ್ಳಲು ಮನವಿ ಮಾಡಿದರು. ರೊ. ಎಂ. ಮಾಧವಾಚಾರ್‌ರವರು ಶಿವಮೊಗ್ಗೆಯ ನಿವಾಸಿಯಾಗಿರುವ ಅಡಿಗೆ










ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಶ್ರೀ ಎಂ. ಕೆ. ಶ್ರೀನಿವಾಸ್ ಮತ್ತು ಶ್ರೀಮತಿ ವೀಣಾರವರ ಪುತ್ರಿ ಕು. ರಾಘಶ್ರೀ ಇವರು ರಾಜ್ಯ ಮಟ್ಟದಲ್ಲಿ ಸ್ಪೀಡ್ ಸ್ಕೇಟಿಂಗ್ ಕಾಂಪಿಟೇಶನ್‌ನಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವರು ಹಣಕಾಸಿನ ಸಮಸ್ಯೆ ಎದುರಿಸುತ್ತಿರುವುದರಿಂದ ಅವರಿಗೆ ಕ್ಲಬ್‌ನ ವತಿಯಿಂದ ಸಹಕಾರಿ ನೀಡಬೇಕಾಗಿ ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ರೋಟರಿ ಅಧ್ಯಕ್ಷರು ಸುಮಾರು 20,000.00 (10,000.00 ರೋಟರಿಯಿಂದ ಮತ್ತುಳಿದದ್ದು ದೇಣಿಗೆಯಿಂದ) ಪಡೆದು ಪಾವತಿಸಲಾಗುತ್ತಿದೆ ಎಂದು ಅಧ್ಯಕ್ಷರು ತಿಳಿಸಿ ರೂ.20,000.00 ಚೆಕ್‌ನ್ನು ಶ್ರೀಮತಿ ವೀಣಾರವರಿಗೆ ನೀಡಿದರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 20–11–2024 ಬುಧವಾರ** **ಸಂಜೆ 6:45**

***Rotary Centenery Foundation of Shimoga Rotary Annual General Body Meeting***

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ



ಮುಖ್ಯ ಅತಿಥಿಗಳ ಪರಿಚಯವನ್ನು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಮಾಡಿಕೊಟ್ಟರು.

ಅಂದು ಮುಖ್ಯ ಅತಿಥಿಗಳಾದ ರೊ.ಎನ್. ವಿ.ಭಟ್‌ರವರು ಚಾರ್‌ಧಾಮ ಯಾತ್ರೆಯ ಬಗ್ಗೆ ವಿವರವಾಗಿ ಪಿಪಿಟಿ ಪ್ರೆಸೆಂಟೇಶನ್ ಮೂಲಕ ವಿವರಿಸಿದರು. ಆರಂಭದಲ್ಲಿ ಅವರು ಮಾತನಾಡುತ್ತಾ ಗುಡ್ಡ ಬೆಟ್ಟಗಳನ್ನು ಅವಲೋಕಿಸಿದಾಗ ನಾವೆಷ್ಟು ಚಿಕ್ಕವರು ಎಂದು ನಮ್ಮ ಅರಿವಿಗೆ ಬರುತ್ತದೆ. ನಾವು ಪ್ರವಾಸ ಹೊರಡುವ ಮೊದಲು ಆ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಇಟ್ಟುಕೊಂಡಿರಬೇಕು. ಮಂಕುತಿಮ್ಮನ ಕಗ್ಗದ ಬಗ್ಗೆ ಒಂದು ಚೌಪದಿಯನ್ನು ತಿಳಿಸಿ, ಏನೆಂದರೂ ನೀನು ಸಣ್ಣವನು ಎಂದು ತಿಳಿಯಬೇಕು ಎಂದರು. ಕೇವಲ 13 ಜಿಲ್ಲೆಗಳಿಂದೊಡಗೂಡಿದ ಬೆಟ್ಟಗುಡ್ಡಗಳಿಂದ ತುಂಬಿದ ಪ್ರವಾಸಿ ತಾಣವಾಗಿದೆ ಉತ್ತರಖಾಂಡ್ ರಾಜ್ಯ. ಇಲ್ಲಿ ಚಾರ್‌ಧಾಮ್ ಪ್ರವಾಸ ಪ್ರಾರಂಭವಾಗುವುದೇ ಹರಿದ್ವಾರದಿಂದ. ಪ್ರವಾಸಿ ಬಾಹುಳ್ಯದಿಂದ ಇಲ್ಲಿ ಈಗ ಪರಿಸರಕ್ಕೆ ಹಾನಿಯಾಗುತ್ತಿದ್ದು, ಪ್ಲಾಸ್ಟಿಕ್ ಬಳಕೆ ಅಧಿಕವಾಗಿದೆ. ಅದನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಮೇ ತಿಂಗಳ ಮೊದಲವಾರದಿಂದ ಪ್ರವಾಸಗಳು ಪ್ರಾರಂಭವಾಗುತ್ತವೆ. 6 ತಿಂಗಳು ಅವಕಾಶವಿರುತ್ತದೆ. ಮೇ ಜೂನ್ ತಿಂಗಳು ಒಳ್ಳೆಯ ಸಮಯ. ಇಲ್ಲಿನ ಕಡಿದಾದ ರಸ್ತೆಗಳು ನಮ್ಮ ಪ್ರವಾಸದ ಅವಧಿಯನ್ನು ಹಿಗ್ಗಿಸುತ್ತವೆ ಎಂದರು.

ಚಾರಧಾಮ್ ಯಾತ್ರೆ ಎಂದರೆ, ಮುಖ್ಯವಾಗಿ ಪೂರ್ವದಲ್ಲಿ ಪುರಿ. ಪಶ್ಚಿಮಕ್ಕೆ ದ್ವಾರಕ. ಉತ್ತರಕ್ಕೆ ಬದರಿ. ದಕ್ಷಿಣಕ್ಕೆ ರಾಮೇಶ್ವರ ಎಂಬುದಾಗಿದೆ. ಆದರೂ ವಾಡಿಕೆಯಲ್ಲಿ ಗಂಗೋತ್ರಿ, ಯಮುನೋತ್ರಿ, ಕೇದಾರ ಮತ್ತು ಬದರೀನಾಥ ಎಂಬುದಾಗಿದೆ. ಇವುಗಳು ಉತ್ತರಖಂಡ ರಾಜ್ಯಕ್ಕೆ ಸೇರಿದವುಗಳಾಗಿದ್ದು ಇದನ್ನು ದೇವಭೂಮಿ ಎನ್ನುತ್ತಾರೆ. ಇಲ್ಲಿನ ಪ್ರದೇಶಗಳನ್ನು ಸಮುದ್ರ ಮಟ್ಟದಿಂದ ಎಷ್ಟು ಅಡಿ ಎತ್ತರವಿದೆ ಎಂದು ಭೌಗೋಳಿಕವಾಗಿ ಅಳತೆ ಮಾಡುತ್ತಾರೆ.

ಯಮುನೋತ್ರಿ ಯಮುನೆ ಇಳಿದಳು ಎನ್ನುವ ಶಬ್ದದಿಂದ ಯಮುನೋತ್ರಿಯಾಯಿತು. ಇದು ಪವಿತ್ರ ನದಿಗಳಲ್ಲಿ ಒಂದಾದ ಯುಮುನಾ ನದಿಯ ಉಗಮ ಸ್ಥಳವಾಗಿದ್ದು ಇಲ್ಲಿ ಯಮುನಾ ದೇವಿಯ ಮಂದಿರವಿದೆ. ಸಮುದ್ರ ಮಟ್ಟದಿಂದ ಸುಮಾರು 3160 ಮೀಟರ್ ಅಥವಾ 10385 ಅಡಿಗಳಷ್ಟು ಎತ್ತರದಲ್ಲಿರುವ ಯಮುನೋತ್ರಿಗೆ ಸಮುದ್ರ ಮಟ್ಟದಿಂದ 8446 ಅಡಿ ಎತ್ರರದಲ್ಲಿರುವ ಜಾನಕಿಚೆಟ್ಟಿ ಎನ್ನುವ ಸ್ಥಳದಿಂದ ಹತ್ತಬೇಕು. ಹತ್ತುವ ದೂರ 9 ಕಿ.ಮಿ ನಷ್ಟೇ ಆದರೂ ಸುಮಾರು 2000 ಅಡಿ ಎತ್ತರವನ್ನು ಒಮ್ಮೇಲೆ ಹತ್ತಬೇಕಾಗುತ್ತದೆ. ಕುದುರೆ ಡೋಲಿ ಹಾಗೂ ಪಿಟ್ಟು ವ್ಯವಸ್ಥೆ ಇದ್ದು ನಾವು ನಡೆದುಕೊಂಡೇ ಯಮುನೋತ್ರಿ ತಲುಪಿದೆವು. ಮೇಲೇರುತ್ತಿದ್ದಂತೆ ತಾಪಮಾನ ಕಡಿಮೆಯಾಗುವುದರಿಂದ, ಅಲ್ಲದೇ ಭಕ್ತಿ ಕೌತುಕದಿಂದ ಪರ್ವತಾರೋಹಣ ಮಾಡಿದ್ದರಿಂದ ತುಂಬಾ ಆಯಾಸವಾಗಲಿಲ್ಲ. ದೂರದಲ್ಲಿ ಹಳದಿ ಹಾಗೂ ಕೆಂಪು ರೂಪದಲ್ಲಿ ಯಮುನೆಯ ಮಂದಿರ ಮನದಲ್ಲಿಧನ್ಯತಾ ಭಾವ ಮೂಡಿಸುತ್ತದೆ. ಸುತ್ತಲಿನ ಹಿಮಾಚ್ಛಾದಿತ ಪರ್ವತಗಳನ್ನು ನೋಡುತ್ತಿದ್ದಂತೆ ಮೈ ಪುಳಕಿತಗೊಳ್ಳುತ್ತದೆ. ಮಂದಿರದ ಪಕ್ಕದಲ್ಲೇ ಮೇಲಿನಿಂದ ರಭಸದಿಂದ ದುಮ್ಮಿಕ್ಕುವ ಯಮುನಾ ನದಿ ಕಂಡೊಡನೆ ಮನೋಲ್ಲಾಸ ಉಂಟಾಗುತ್ತದೆ.

ಮಂದಿರದ ಪಕ್ಕದಲ್ಲೇ ಬಿಸಿನೀರಿನ ಕುಂಡವಿದ್ದು, ಸ್ನಾನದ ವ್ಯವಸ್ಥೆ ಇದೆ. ಯಮುನೆಯಲ್ಲಿ ಸ್ನಾನ ಮಾಡುವ ಮನಸ್ಸಾದರೂ ಹಿಮದ ನೀರನ್ನು ಮುಟ್ಟಲಷ್ಟೆ ಸಾಧ್ಯವಾಯಿತು. ಧನ್ಯತಾ ಭಾವದಿಂದಲೇ ಯಮುನಾ ನದಿ ದೇವಿಯ ದರ್ಶನ ಮಾಡಿ ಪವಿತ್ರ ಜಲ ಸಂಗ್ರಹಿಸಿಕೊಂಡು, ನಿದಾನವಾಗಿ ಕೆಳಗಿಳಿದು ವಸತಿ ಗೃಹ ಸೇರಿಕೊಂಡೆವು. ಆದರೆ ನಾವು ಗಂಗಾಮೂಲಕ್ಕೆ ಹೋಗಲಾಗಲಿಲ್ಲ.

**ಉತ್ತರಾಖಾಂಡದಲ್ಲಿರುವ ಪ್ರಮುಖ ನದಿಗಳ ಉಗಮಸ್ಥಾನಗಳು:** ಭಾಗೀರಥಿ, ಅಲಕಾನಂದ, ಯಮುನಾ, ಗಂಗಾ, ಸರಸ್ವತಿ, ಕೋಸಿ, ರಾಮ ಗಂಗಾ, ಮಂದಾಕಿನಿ, ಸರಯೂ ನದಿಗಳು. ಪ್ರಯಾಗ ಸ್ಥಳಗಳು ಪುಣ್ಯಕ್ಷೇತ್ರಗಳು. ವಿಷ್ಣು ಪ್ರಯಾಗ್, ನಂದ ಪ್ರಯಾಗ್, ಕರ್ಣ ಪ್ರಯಾಗ್, ರುದ್ರ ಪ್ರಯಾಗ್, ದೇವ ಪ್ರಯಾಗ್‌ಗಳು. ಉತ್ತರಖಂಡದ ವಿಸ್ತೀರ್ಣ 54000 ಚ.ಕಿಮಿಗಳಿದ್ದು, ಜನಸಂಖ್ಯೆ 1.10 ಕೋಟಿ ಇರುತ್ತದೆ. ನದಿಗಳು ಎತ್ತರದಿಂದ ರಭಸವಾಗಿ ಹರಿಯುವುದರಿಂದ ಜಲವಿದ್ಯುತ್ ಯೋಜನೆಗಳು ಹೆಚ್ಚಿವೆ ಮತ್ತು ಇವುಗಳಿಂದಲೇ ಪ್ರಮುಖ ಆದಾಯ ಎಂದರು. ಅಲ್ಲದೇ ವರ್ಷವಿಡಿ ಪ್ರವಾಸಿಗಳು ಆಗಮಿಸುವುದರಿಂದಲೂ ಆದಾಯವಿದೆ. ಉತ್ತರಖಾಂಡ್ ರಾಜ್ಯವು ಉತ್ತರ ಪ್ರದೇಶದಿಂದ 2000 ನೇ ಇಸವಿಯಲ್ಲಿ ಬೇರೆಯಾಗಿ ದೇಶದ 27 ನೇ ರಾಜ್ಯವಾಗಿ ಉದಯವಾಯಿತು.ಇದು ಟಿಬೆಟ್ ಹಾಗೂ ಚೈನಾದೊಂದಿಗೆ ಗಡಿಗಳನ್ನು ಹೊಂದಿದೆ. ಇದರ ರಾಜಧಾನಿ ಡೆಹ್ರಾಡೂನ್. ಇಲ್ಲಿ ಸಮುದ್ರ ಮಟ್ಟದಿಂದ 6000 ಅಡಿಯಿಂದ 24000 ಅಡಿಯವರೆಗೆ ಪ್ರಯಾಣವಿರುತ್ತದೆ. ಇಲ್ಲಿ ಪ್ರಯಾಣ ಕೈಗೊಳ್ಳುವ ಮುನ್ನ ಒಂದಷ್ಟು ಮಾಹಿತಿ.ಎಂ.ಎಸ್.ಎಲ್.ಮೀನ್ ಸೀ ಲೆವೆಲ್ (ಸಮುದ್ರಮಟ್ಟ ಪ್ರದೇಶವನ್ನು ಗುರುತಿಸುತ್ತಾರೆ. ಉದಾಹರಣೆಗೆ ಶಿವಮೊಗ್ಗ–1861 ಅಡಿ, ಕರ್ನಾಟಕ– 1500 ಅಡಿ, ಕೊಡಚಾದ್ರಿ– 4400 ಅಡಿ, ಮುಳ್ಳಯ್ಯನಗಿರಿ – 6000 ಅಡಿ. ಉಡುಪಿ ಮಂಗಳೂರು 20 ಅಡಿ.

ಎಂ.ಎಸ್. ಎಲ್. ಯಾಕೆ ಮುಖ್ಯಅಂದರೆ, ಯಾವುದೇ ಪ್ರದೇಶದ ಎಂ.ಎಸ್.ಎಲ್. ಗಮನಿಸಿದರೆ ಅಲ್ಲಿಯ ಹವಾಮಾನವನ್ನು ಅಂದಾಜಿಸಬಹುದು. ಅಲ್ಲದೇ ಚಾರ್‌ಧಾಮಗಳೆಲ್ಲವೂ ಹಿಮಾಲಯದ ಪರ್ವತ ಶ್ರೇಣಿಯಲ್ಲೇಇವೆ.

ಚಾರಧಾಮ್ ಹೋಗುವವರಿಗೆ ಹೆಲಿಕಾಪ್ಟರ್ ವ್ಯವಸ್ಥೆ ಲಭ್ಯವಿದ್ದರೂ ಮೊದಲೇ ಎಲ್ಲಾ ಸೀಟ್‌ಗಳು ಆನ್‌ಲೈನ್‌ನಲ್ಲಿ ಭರ್ತಿಯಾಗಿರುತ್ತವೆ. ಕಷ್ಟಪಟ್ಟು ನಮ್ಮ ವ್ಯವಸ್ಥಾಪಕರು ಏಜೆಂಟರ ಮೂಲಕ ತುಂಬಾ ಅವಶ್ಯವಿರುವ 7–8 ಜನರಿಗೆಟಿಕೇಟ್ ಕೊಡಿಸಿದ್ದರು. ಮಾಮೂಲಿ ದರ 6000 ದಷ್ಟಿದ್ದು 4 ಪಟ್ಟು ಹೆಚ್ಚು ದರಕೊಟ್ಟು ಟಿಕೇಟ್ ಖರೀದಿಸಬೇಕಾಗುತ್ತದೆ. ಒಟ್ಟಿನಲ್ಲಿ ಮಧ್ಯವರ್ತಿಗಳು ಹಣ ಮಾಡಿಕೊಳ್ಳಲು ದಾರಿಯಾಗಿದೆ. ತುಂಬಾ ಕಡಿದಾದ ಮೆಟ್ಟಿಲುಗಳುಳ್ಳ ರಸ್ತೆ ಎನ್ನಬಹುದಾದ ಕಿರಿದಾದ ಜಾಗದಲ್ಲಿ ಕುದುರೆಯಲ್ಲಿ ಏರುತ್ತಿದ್ದರೆ ಒಮ್ಮೊಮ್ಮೆ ಹೃದಯವೇ ಬಾಯಿಗೆ ಬಂದಂತೆ ಗಾಬರಿ ಆತಂಕ. ಕುದುರೆ ಹಿಡಿದವರು ಒಂದು ಕ್ಷಣ ಮೈಮರೆತರೂ ಕುದುರೆಯೊಡನೆ ನಾವೂ ಪ್ರಪಾತಕ್ಕೆ. ಮನೆ ದೇವರನ್ನು ಕೇದಾರನನ್ನು ನೆನೆಯುತ್ತಾ ಮಧ್ಯೆ ಮಧ್ಯೆ ಇಳಿದು ಟೀ ಕುಡಿಯುತ್ತಾ ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಕೇದಾರ ತಲುಪಿದೆವು. ಹೋಗುವಾಗ ತಿರುವುಗಳಲ್ಲಿ ಕಾಣಸಿಗುವ ಮಂದಾಕಿನಿ ನದಿ ಸುತ್ತಲೂ ಗುಡ್ಡ ಬೆಟ್ಟಗಳ ನಯನ ಮನೋಹರ ದೃಶ್ಯ ದೂರದ ಪರ್ವತಗಳ ಮೇಲೆ ಯಾರೋ ಬೆಣ್ಣೆಚೆಲ್ಲಿದಂತೆ ಹಿಮ ಪರ್ವತಗಳು, ಇವುಗಳನ್ನು ನೋಡುತ್ತಿದ್ದಂತೆ ಆಯಾಸವೆಲ್ಲಾ ಪರಿಹಾರ. ಕುದುರೆ ಮೇಲಿನಿಂದ ಫೋಟೋತೆಗೆಯುವಾಗ ಬಹಳ ಗಮನವಿರಬೇಕು. ಮೇಲೇರಿದಂತೆ ಉಷ್ಣಾಂಶ ಕಡಿಮೆಯಾಗುತ್ತಾ ಕೇದಾರದಲ್ಲಿ 6 ರಿಂದ 8 ಡಿಗ್ರಿ ಉಷ್ಣಾಂಶವಿದ್ದು, ಹಿತಕರವೆನಿಸುತ್ತದೆ. ಕುದುರೆ ಇಳಿದು 2.0 ಕಿ.ಮಿ ನಡೆದು ದೇವಸ್ಥಾನದ ಹತ್ತಿರ ಬರುತ್ತಿದ್ದಂತೆ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತ ಜನರನ್ನು ನೋಡಿ ದಿಗ್ಭ್ರಮೆಗೊಂಡೆವು. ಸುಮಾರು 3.0 ಕಿ.ಮಿ ಗೂ ಮೀರಿದ ಸರತಿ ಸಾಲಿನಲ್ಲಿ ಹಿಂದಿನ ದಿನದ ರಾತ್ರಿಯಿಂದಲೇ ಯಾತ್ರಿಕರು ನಿಂತಿದ್ದು ತಿಳಿಯಿತು.

ವ್ಯವಸ್ಥಾಪಕರು ಮೊದಲೇ ತಿಳಿಸಿದಂತೆ ದೇವಸ್ಥಾನದ ಹೊರಗಡೆಗೇ ಸುತ್ತು ಹೊಡೆದೆವು. ಅತಿಗಣ್ಯರಿಗೆ ದೇವಸ್ಥಾನ ಪ್ರವೇಶ ಕೊಡಿಸಲು ಪಾಂಡಗಳು ಅಲ್ಲಲ್ಲಿ ಕಂಡು ಮರೆಯಾಗುತ್ತಾರೆ. ನಾವು ಅವರ ಹಿಂದೆ ಹೋದಾಗ ಅವರ ಮನಸ್ಸಿಗೆ ಬಂದರೆ, ಅಂದರೆ ಒಬ್ಬರಿಗೆ 4 ರಿಂದ 5 ಸಾವಿರದವರೆಗೂ ಬೇಡಿಕೆ ಇಟ್ಟು ಆಮೇಲೆ 1 ಸಾವಿರ ಕಡಿಮೆ ಮಾಡುತ್ತಾರೆ. ಅದೂ ಮಧ್ಯಾಹ್ನ 1 ಗಂಟೆಯವರೆಗೆ ದೇವರನ್ನು ಮುಟ್ಟಿ ಪೂಜೆ ಮಾಡಲು ಅವಕಾಶ. ಹಾಗಾಗಿ ಬೆಳಗಿನ ವೇಳೆಯಲ್ಲಿ ಬೇಡಿಕೆ ಜಾಸ್ತಿ. ದುಡ್ಡುಕೊಟ್ಟರೂ ವಿಶೇಷ ಸರತಿ ಸಾಲಿನಲ್ಲಿ ಹಿಂಭಾಗದ ಬಾಗಿಲಿನಿಂದ ನೂಕು ನುಗ್ಗಲಿನಲ್ಲೆ ದೇವಸ್ಥಾನದ ಒಳಗೆ ಹೋಗಬೇಕು. ಅವ್ಯವಸ್ಥೆ ನೋಡಲು ಬೇಸರವಾಗುತ್ತದೆ. ಕೇದಾರನಾಥನ ದರ್ಶನ ಪಡೆದ ಮೇಲೆ ಕಷ್ಟಪಟ್ಟು ಬಂದ ಆಯಾಸವೆಲ್ಲ ಮಾಯ. ಇಲ್ಲಿ ಕೇದಾರನಾಥ ಲಿಂಗದ ರೂಪದಲ್ಲಿರದೇ ಶಿಲೆಯಲ್ಲೇ ಉಬ್ಬಿದ ರೂಪ ಕಾಣುತ್ತದೆ.

ಇದಕ್ಕೊಂದು ಪೌರಾಣಿಕ ಹಿನ್ನೆಲೆಯೂ ಇದೆ. ಹಿಂದೆ ಯುದ್ಧದಲ್ಲಿ ಪಾಂಡವರಿಗೆ ಬ್ರಹ್ಮಹತ್ಯಾದೋಷವುಂಟಾದಾಗ ಶಿವನನ್ನು ಒಲಿಸಿಕೊಳ್ಳುವಂತೆ ಪ್ರಾಜ್ಞರು ಹೇಳಿದಾಗ ಪಾಂಡವರು ಶಿವನನ್ನು ಹುಡುಕಿಕೊಂಡು ಇಲ್ಲಿನ ಪರ್ವತ ಶ್ರೇಣಿಗಳಿಗೆ ಬರುತ್ತಾರೆ, ಗುಪ್ತಕಾಶಿ ಎನ್ನುವ ಸ್ಥಳದಲ್ಲಿ ಕಾಣಿಸಿಕೊಂಡು ಅದೃಶ್ಯನಾದ ಶಿವ ಕೇದಾರ ಪರ್ವತದಲ್ಲಿ ನಂದಿಯಾಗಿ ಕಾಣಿಸಿಕೊಳ್ಳುತ್ತಾನೆ. ನಂದಿಯನ್ನು ಪಾಂಡವರು ತಬ್ಬಿಕೊಳ್ಳಲು ಹೋದಾಗ ನಂದಿ ಕಣ್ಮರೆಯಾದರೂ ನಂದಿಯ ಡುಬ್ಬ ಕೈಯ್ಯಲ್ಲಿ ಸಿಗುತ್ತದೆ. ಹಾಗಾಗಿ ಕೇದಾರನಾಥನಿಗೆ ಈ ರೂಪ.

ನಂತರ ಹತ್ತಿರದಲ್ಲೇ ಇರುವ ಶಂಕರಾಚಾರ್ಯರ ಕಪ್ಪು ಶಿಲೆಯ ಪ್ರತಿಮೆಯನ್ನು ನೋಡಿದೆವು. ಇನ್ನೂ ಒಂದು ಕಿ.ಮಿ. ಬೆಟ್ಟ ಹತ್ತಿ ಕಾಲಭೈರವ ದೇವಸ್ಥಾನ ವೀಕ್ಷಿಸಿದೆವು. ಕೇದಾರನಾಥ ದೇವಸ್ಥಾನದ ಹಿಂಭಾಗದಲ್ಲಿರುವ ಭೀಮ ಬಂಡೆಕಂಡು ದಿಗ್ಭ್ರಮೆಗೊಂಡೆವು. 2013 ರಲ್ಲಿ ಹಿಂದೆಂದು ಕಂಡರಿಯದ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದ ಒಂದು ಬೃಹತ್ ಶಿಲೆ ದೇವಸ್ಥಾನದ ಹಿಂಭಾಗ ಬಂದು ಅಲ್ಲೇ ನಿಂತಿದೆ. ಅದು ಸ್ವಲ್ಪ ಮುಂದೆ ಹೋಗಿದ್ದರೂ ದೇವಸ್ಥಾನ ಪುಡಿ ಪುಡಿಯಾಗುತ್ತಿತ್ತು. ಅದಕ್ಕೆಂದೇ ಅಲ್ಲೇ ಆ ಶಿಲೆಗೆ ಪೂಜೆ ಸಲ್ಲಿಸುತ್ತಾರೆ.

ನಂತರ ನಮ್ಮ ಪ್ರಯಾಣ ಬದ್ರಿನಾಥ ಕಡೆಗೆ. ಬೆಳಿಗ್ಗೆ 7.00 ಗಂಟೆಗೆ ಹೊರಟು ಗುಪ್ತ ಕಾಶಿಯ ವಿಶ್ವನಾಥನ ದರ್ಶನ ಪಡೆದು ರುದ್ರಪ್ರಯಾಗ ತಲುಪಿದೆವು.ಈ ಸ್ಥಳ ಅದು ಮಂದಾಕಿನಿ ಅಲಕಾನಂದ ನದಿಯೊಡನೆ ಸಂಗಮಿಸುವ ಸ್ಥಳ. ದೂರದಿಂದಲೇ ವಿಹಂಗಮ ದೃಶ್ಯ ನೋಡಿರಾತ್ರೆ 8.00 ಕ್ಕೆ ಬದ್ರಿನಾಥ ತಲುಪಿದೆವು. ಬದ್ರಿನಾಥ ದೇವಸ್ಥಾನವು ಸಮುದ್ರಮಟ್ಟದಿಂದ 10750 ಅಡಿ ಎತ್ತರದಲ್ಲಿದ್ದು, ರಸ್ತೆ ಮಾರ್ಗ ತುಂಬಾ ಕಿರಿದಾಗಿದ್ದು, ಸದಾ ಟ್ರಾಫಿಕ್‌ಜಾಮ್ ಆಗುತ್ತದೆ. ರಾತ್ರೆ ಸರತಿ ಸಾಲಿನ ಉದ್ದ ಕಡಿಮೆ ಇದ್ದುದರಿಂದ ರಾತ್ರೆಯೇ ನಾರಾಯಣನ ದರ್ಶನ ಪಡೆದು ಪುನೀತರಾದೆವು. ಈ ಸ್ಥಳ ಭೂಲೋಕದ ವೈಕುಂಠ. ಅಲಕಾನಂದ ತಟದಲ್ಲಿ ಕಟ್ಟಿಗೆಯಲ್ಲಿ ನಿರ್ಮಿಸಿದ ಈ ದೇವಸ್ಥಾನ. ವಿವಿಧ ಬಣ್ಣದ ದೀಪಗಳಲ್ಲಿ ಮಿನುಗುವುದನ್ನು ನೋಡುವುದೇ ಒಂದು ಚಂದ. ರಾತ್ರೆಯಾದಂತೆ ಉಷ್ಣತೆ 4 ಡಿಗ್ರಿಗಳಿಗಿಂತ ಕಡಿಮೆಯಾಗಿ ಮಳೆ ಸುರಿಯಿತು.

ಬದರೀನಾಥ ದೇವಸ್ಥಾನವನ್ನು ಸುಮಾರು 200 ವರ್ಷಗಳ ಹಿಂದೆ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಹಿಂದೆ ವಿಷ್ಣುವಿನ ವಿಗ್ರಹ ಕಾಣದಾಗಿ ಕಿಡಿಗೇಡಿಗಳು ಅದನ್ನು ಅಲಕಾನಂದ ನದಿಯಲ್ಲಿ ಹಾಕಿದ್ದು ಗೊತ್ತಾಗಿ ಅಂತಹ ಕೊರೆಯುವ ಚಳಿಯಲ್ಲಿ ತಣ್ಣಗಿನ ನೀರಿನಲ್ಲಿಳಿದು ಶ್ರೀ ಶಂಕರಚಾರ್ಯರು ವಿಗ್ರಹವನ್ನುತೆಗೆದು ಪುನಃ ಸ್ಥಾಪಿಸಿದರೆಂಬ ಪ್ರತೀತಿ ಇದೆ. ಇದು ಸ್ವಯಂಭು ವಿಷ್ಣುವಿನ ದೇವಳವಾಗಿದೆ.

ನಂತರ ಪ್ರತ್ಯೇಕ ಜೀಪುಗಳಲ್ಲಿ ಟಿಬೆಟ್ ಗಡಿ ಪ್ರದೇಶದ ಮಾಣ ಎನ್ನುವ ಊರಿಗೆ ಪ್ರಯಾಣ. ಅಲ್ಲಿ ಗಣೇಶ ಗುಹ ಹಾಗೂ ವ್ಯಾಸ ಗುಹೆಗಳನ್ನು ನೋಡಿದೆವು. ಇಲ್ಲಿಯೇ ಗಣಪತಿ ವ್ಯಾಸರು ಹೇಳಿದಂತೆ ಮಹಾಭಾರತ ಹಾಗೂ 18 ಪುರಾಣಗಳನ್ನು ರಚಿಸಿದನೆಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿರುವ ವ್ಯಾಸ ಗುಹೆಯ ಎದುರು ಗುಹೆಯೂ 2022 ನೇ ಇಸವಿಗೆ 5330 ವರ್ಷಗಳಷ್ಟು ಹಳೆಯದೆಂದು ಬರೆದಿದ್ದಾರೆ. ಅಲ್ಲಿಂದ ಸರಸ್ವತಿ ನದಿಯ ಉಗಮ ಸ್ಥಳದಲ್ಲಿ ನೂತನವಾಗಿ ಕಟ್ಟಲಾದ ಸರಸ್ವತಿ ದೇವಸ್ಥಾನ ಹಾಗೂ ಪಾಂಡವರು ಸ್ವರ್ಗಾರೋಹಣ ಮಾಡಲು ಪ್ರಾರಂಭಿಸಿದ ಸ್ಥಳ ವೀಕ್ಷಿಸಿದೆವು. ಇಲ್ಲಿಂದ 300 ಮೀಟರ್‌ದೂರದಲ್ಲಿ ಈ ಸರಸ್ವತಿ ಅಲಕಾನಂದ ನದಿ ಸೇರುತ್ತದೆ. ಆದರೆ ಸರಸ್ವತಿ ನಾಗರೀಕತೆ ಎನ್ನುವ ಪುಸ್ತಕದಲ್ಲಿ ಸಿಂಧೂ ನಾಗರೀಕತೆಗಿಂತ ಮೊದಲು ಸರಸ್ವತಿ ನಾಗರೀಕತೆ ಇದ್ದು, 4700 ವರ್ಷಗಳ ಹಿಂದೆ ಹಿಮಾಲಯದಲ್ಲಿ ಭೀಕರ ಭೂಕಂಪಗಳುಂಟಾಗಿ ಸರಸ್ವತಿ ನದಿ ಸೇರುತ್ತಿದ್ದ ಯಮುನಾ ನದಿ ದಿಕ್ಕು ಬದಲಿಸಿ ಗಂಗಾನದಿ ಸೇರುವಂತಾಯಿತು. ಇಂದಿಗಿಂತ 2600 ವರ್ಷಗಳ ಹಿಂದೆ ಸಟ್ಲೇಜ್ ನದಿಯು ಪಶ್ಚಿಮಕ್ಕೆ ತಿರುಗಿ ಸಿಂದು ನದಿ ಸೇರಿದ್ದರಿಂದ ಹಿಮನದಿಗಳ ಸಹಾಯವಿಲ್ಲದೆ ಸರಸ್ವತಿ ನದಿ ಬತ್ತಿ ಹೋಯಿತು. ಅಲ್ಲಿಂದ ನಾಗರೀಕತೆ ಸಿಂಧೂ ನದಿ ತೀರಕ್ಕೆ ಸ್ಥಳಾಂತರವಾಯಿತೆಂದು ವೈಜ್ಞಾನಿಕವಾಗಿ ಸಾಬೀತು ಪಡಿಸಿದ್ದಾರೆ. ಏನೇ ಇರಲಿ ನಾವಂತೂ ಹಿಮನದಿ ನೋಡಿ ಸಂತೋಷಪಟ್ಟೆವು.






ಅಲ್ಲಿಂದ ನಂತರ ಹೃಷೀಕೇಶಕ್ಕೆ ಬಂದೆವು. ಅಲ್ಲಿ ಯೋಗ ಸೆಂಟರ್ ಋಷಿಮುನಿಗಳ ಆಶ್ರಮಗಳಿವೆ. ಅವೆಲ್ಲವೂ ಚೆನ್ನಾಗಿ ಅಭಿವೃದ್ಧಿ ಹೊಂದಿವೆ. ಜೀವನದಲ್ಲಿ ಕಷ್ಟವಿದೆ. ಆದರೆ ನಿಖರವಾದ ಯೋಜನೆಯನ್ನು ಮಾಡಿಕೊಂಡು ಪ್ರವಾಸಕ್ಕೆಗೊಂಡರೆ ಎಲ್ಲವೂ ಸುಸೂತ್ರವಾಗಿ ನೆರವೇರುತ್ತದೆ ಎಂದು ತಮ್ಮ ಮಾತನ್ನು ಮುಗಿಸಿದರು.

ನಂತರ ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಹೃಷಿಕೇಶ, ಹರಿದ್ವಾರ, ಬದರೀನಾಥಕ್ಕೆ ಹೊರಟರೆ ಎಲ್ಲೆಡೆಯೂ ನೀವು ಪ್ರಕೃತಿಯ ಸೊಬಗನ್ನು ಸವಿಯಬಹುದು ಎನ್ನುತ್ತಾ ಇಂದು ರೊ.ಎನ್.ವಿ.ಭಟ್‌ರವರು ಚಾರ್‌ಧಾಮ್ ಯಾತ್ರೆಯ ಬಗ್ಗೆ ತಿಳಿಸಿಕೊಟ್ಟದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸೂಚಿಸಿದರು. ರೊ. ಎನ್.ಎಸ್.ಶ್ರೀಧರ್, ರೊ. ವೈ.ಜಿ.ಗುಪ್ತ, ರೊ.ವೈ.ವಿ.ವೆಂಕಟರಮಣ ಜೋಯ್ಸ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸೇರಿ ರೊ.ಎನ್.ವಿ.ಭಟ್ ಮತ್ತು ರೊ. ಭಾರ್ಗವಿ ಭಟ್‌ರವರಿಗೆ ಸನ್ಮಾನಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಸರ್ವರಿಗೂ ವಂದಿಸಿದರು ಜೊತೆಗೆ ರೊ.ಲಕ್ಷ್ಮೀನಾರಾಯಣ ಭಟ್‌ರವರಿಗೆ ಪಿಪಿಟಿ ಪ್ರೆಸೆಂಟೇಷನ್‌ಗೆ ಸಹಕರಿಸಿದ್ದಕ್ಕೆ ವಂದಿಸಿದರು. ರಾಷ್ಟ್ರಗೀತೆಯೊಂದಿಗೆ ರೊ. ವೈ.ವಿ. ವೆಂಕಟರಮಣ ಜೋಯ್ಸ್‌ರವರಿಂದ 'ಭಾರತ ಮಾತಾಕಿ ಜೈ' ಉದ್ಘೋಷದೊಂದಿಗೆ ಸಭೆ ಸಮಾಪ್ತಿಯಾಯಿತು.

## SUCCESS STORIES"GLOBAL GRANT PROJECT:

GOWTHAMPURA SCHOOL PROJECT OF ROTARY CLUB OF SHIMOGA "Rotary Global Grant GG2458250: Application approved."Global grant application for funding to provide toilet blocks, smart classrooms, and teacher training at Vidya Bharathi English Medium School Gowthamapura in Gowthampura, Karnataka, India., submitted by the Rotary Club of Shimoga and the Rotary Club of Fort Collins-Breakfast, has been approved by Rotary Foundation (India) (RF(I)) and the Trustees of The Rotary Foundation (TRF). The award is in the amount of US$45,470.

**Project Budget:**

1. DDF from R.I.Dist. 5440 $ 10,000.00
2. DDF from R.I.District 3182 $ 8,000
3 Cash from R.C. Fort Collins Breakfast $ 5,000 + $250 [Adm. Charges]
4. Cash from R.C.Shimoga $ 8070 + $ 403.50 [Admn. Charges]
5. TRF $14,400

Total: $ 45,470 [INR 37,74,000/=]

**Project Contacts:** Rtn. Senthil Velan [Shimoga] and Rtn. Dr. Krishna C. Murthy [Fort-Collins Breakfast, R.I.District 5440]

**- Rtn. PDG Dr. P. Narayan**



## ಸಂಪಾದಕೀಯ

### ಯಾಕೋ ಸಿಕ್ಕಾಕೊಂಡೆ...!?

ಇದೊಂದು ಹಿಂದೆ ಸಿದ್ಧಗಂಗಾ ಮಠದಲ್ಲಿ ನಡೆದ ಘಟನೆ. ಮಠದ ಜಮೀನಿನಲ್ಲಿ ತೆಂಗಿನಕಾಯಿ ಕಳವಾಗುತ್ತಿದ್ದವು. ಅದು ಜಮೀನಿನ ಕಾವಲುಗಾರರ ಗಮನಕ್ಕೂ ಬಂದಿತ್ತು. ಕಳ್ಳನನ್ನು ಹಿಡಿಯಬೇಕೆಂದು ಕಾವಲುಗಾರರು ನಾನಾ ಬಗೆ ಪ್ರಯತ್ನಗಳನ್ನು ಮಾಡಿದರು. ಎಲ್ಲೆಲ್ಲಿಯೋ ಹೊಂಚು ಹಾಕಿಕೊಂಡು ಕೂತರು. ಆದರೆ ಕಸಬುದಾರ ಕಳ್ಳ ಅವರಿಗೇ ಚಳ್ಳೆಹಣ್ಣು ತಿನ್ನಿಸಿ ಯಾವ ಮಾಯದಲ್ಲೋ ಬಂದು ಕಾಯಿ ಉದುರಿಸಿಕೊಂಡು ಹಾರಿಹೋಗಿ ಬಿಡುತ್ತಿದ್ದ. ಜಮೀನಿನಲ್ಲಿ ಕಾಯಿ ಕಳವಾಗುತ್ತಿರುವ ವಿಷಯ ಮೇಲುಸ್ತುವಾರಿದಾರರಿಗೂ ತಿಳಿದಾಗ ಅವರು ಕಾವಲುಗಾರರನ್ನು ಕರೆದು ಉಗಿದು ಉಪ್ಪು ಹಾಕಿದರು. ಕಾವಲುಗಾರರಿಗೆ ಇನ್ನು ಈ ಕಳ್ಳನನ್ನು ಹಿಡಿಯದಿದ್ದರೆ ನಮಗೆ ಉಳಿಗಾಲವಿಲ್ಲ ಅನ್ನಿಸಿತು. ಅವನು ಸಿಕ್ಕಿದರೆ ಕೈಕಾಲು ಮುರಿಯಬೇಕು ಅಂದುಕೊಂಡು ಕಣ್ಣಲ್ಲಿ ಕಣ್ಣಿಟ್ಟು ಕಾದರು.

ಕಳ್ಳ ಸಿಕ್ಕಿ ಬಿದ್ದ. ಎಲ್ಲಿತ್ತೋ ಸಿಟ್ಟು ಕಾವಲುಗಾರರಿಗೆ, ಕಳ್ಳನನ್ನು ಹಿಡಿದು ಚೆನ್ನಾಗಿ ತದುಕಿದರು. ಮುಂಗೈ ಗಾತ್ರದ ಹೊಂಗೆ ಬಡಿಗೆಯಲ್ಲಿ ಮೈತುಂಬಾ ಬಾಸುಂಡೆ ಏಳುವಂತೆ ಬಡಿದು ಮರಕ್ಕೆ ಕಟ್ಟಿಹಾಕಿದರು. ಮೇಲ್ವಿಚಾರಕರಿಗೆ ಸುದ್ದಿ ಹೋಯಿತು. ಅವರೂ ಬಂದರು. ಕಳ್ಳನನ್ನು ಪೊಲೀಸರಿಗೆ ಒಪ್ಪಿಸಬೇಕೆಂದುಕೊಂಡರು. ಅದಕ್ಕೆ ಮೊದಲು ಯಾವುದಕ್ಕೂ 'ಬುದ್ದಿ'ಯೋರಿಗೆ ಒಂದು ಮಾತು ಹೇಳಬೇಕೆಂದು ಸುದ್ದಿ ತಲುಪಿಸಿದರು. 'ನಡೆದಾಡುವ ದೇವರು' ತಮ್ಮ ಮರದ ಪಾದುಕೆಗಳನ್ನು ಟರ ಟರ ಎಳೆದುಕೊಂಡು, ಕಳ್ಳನನ್ನು ಕಟ್ಟಿಹಾಕಿದ್ದ ಮರದ ಬಳಿಗೆ ದಾಪುಗಾಲಿನಲ್ಲಿ ಬಂದರು. ಎಲ್ಲರಿಗೂ ಕುತೂಹಲ. ಈಗ ಏನು ಮಾಡುತ್ತಾರೆ ಬುದ್ದಿಯೋರು !?

ಶಿವಕುಮಾರ ಮಹಾಸ್ವಾಮಿಗಳವರು ಕಳ್ಳನನ್ನು ನೋಡಿದರು. ಕಳ್ಳ, 'ಬುದ್ಧೀ ' ಅಂತ ಒರಲುತ್ತಾ ಕಟ್ಟಿಹಾಕಿದಲ್ಲೇ ಮಿಸುಗಾಡಿದ. ಅವನ ಪರಿಸ್ಥಿತಿಯನ್ನು ಕಂಡ ಬುದ್ಧಿಯೋರ ಕಣ್ಣುಗಳು ಒದ್ದೆಯಾದವು. ಕರುಣೆಯ ಕೊಳವಾದರು ಸ್ವಾಮೀಜಿ. ತಮ್ಮ ಸಿಬ್ಬಂದಿಯನ್ನು ನೋಡಿ 'ಛೀ ಪಾಪಿಗಳಾ, ನೀವೇನು ಮನುಷ್ಯರಾ? ರಾಕ್ಷಸರಾ? ಬಾಸುಂಡೆ ಬರುವಂತೆ ಬಡಿದಿದ್ದೀರಲ್ಲೋ ' ಅನ್ನುತ್ತಾ 'ಮೊದಲು ಈ ಕಟ್ಟು ಬಿಚ್ಚಿ' ಅಂತ ಗುಡುಗಿದರು. ಕಟ್ಟು ಬಿಚ್ಚಿದ ಮೇಲೆ ಕಳ್ಳನ ಸಮೀಪ ಹೋಗಿ, ' ಅಲ್ಲ ಕಣೋ, ಕದಿಯೋದು ಕದ್ದೆ, ಯಾಕೋ ಸಿಕ್ಕಾಕೊಂಡೆ ? ದಡ್ಡ, ದಡ್ಡ, ಕದ್ದು ಹೀಗೆ ಸಿಕ್ಕಾಕೋತಾರೇನೋ' ಅಂದರು.

ಮಠದ ಸಿಬ್ಬಂದಿಗೆ ಆಶ್ಚರ್ಯ. ಇದೇನು ಬುದ್ಧಿಯೋರ ಮಾತು!? ಕಳ್ಳನನ್ನು ಯಾಕೆ ಕದ್ದೆ ಅಂತ ಕೇಳುವುದನ್ನು ಬಿಟ್ಟು ಯಾಕೆ ಸಿಕ್ಕಾಕೊಂಡೆ ಅಂತ ಕೇಳ್ತಾ ಇದ್ದಾರಲ್ಲ ಅಂತ. ಆದರೆ ಸ್ವಾಮಿಗಳು 'ಛೆ ಛೆ ಎಂಥಾ ಕೆಲಸ ಆಗೋಯ್ತು?' ಅಂದುಕೊಂಡು ಅವನನ್ನು ತಮ್ಮೊಂದಿಗೇ ಮಠಕ್ಕೆ ಕರೆದುಕೊಂಡು ಹೋದರು. ಅವನ ಹೊಟ್ಟೆ ತುಂಬಾ ಊಟ ಹಾಕಿಸಿದರು. ಊಟವಾದ ಮೇಲೆ ಅವನ ಕೈಗೆ ಐವತ್ತೋ ನೂರೋ ಕೊಟ್ಟು 'ಈಗ ಹೋಗು, ಇನ್ನು ಮೇಲೆ ಕಳ್ಳತನ ಮಾಡಿದರೆ ಯಾರ ಕೈಗೂ ಸಿಕ್ಕಾಕೋಬೇಡ' ಅಂತ ಅಂದರು. ಕಳ್ಳ ಕಣ್ಣೀರು ಸುರಿಸುತ್ತಾ ಬುದ್ದಿಯೋರ ಪಾದಗಳ ಮೇಲೆ ಬಿದ್ದು ಹೊರಳಾಡಿದ. 'ನಾನೆಲ್ಲೂ ಹೋಗೋದಿಲ್ಲ ಬುದ್ಧೀ, ನಿಮ್ಮ ಸೇವೆ ಮಾಡಿಕೊಂಡು ಮಠದಲ್ಲೇ ಇರ್ತೀನಿ' ಅಂತ ಗೋಳಾಡಿದ. ಸ್ವಾಮೀಜಿಯವರು ಅವನಿಗೆ ಮಠದಲ್ಲೇ ಒಂದು ಕೆಲಸವನ್ನೂ ಕೊಟ್ಟರು.

ಕರುಣೆಯ ನ್ಯಾಯಾಲಯದ ಕಾನೂನುಗಳೇ ಬೇರೆ !

ಇದರ ನೀತಿಯೆಂದರೆ ಸ್ವಾಮೀಜಿಯವರಿಗೆ ಆ ಕಳ್ಳನಿಗೆ ತಪ್ಪಿನ ಅರಿವು ಮಾಡಿಸಬೇಕಿತ್ತೇ ಹೊರತು ಶಿಕ್ಷಿಸುವುದಲ್ಲ. ಅಂತೆಯೆ ಕಳ್ಳನು ಸಾಮಾನ್ಯ ನಾಗರಿಕನಾಗಿ ಬದುಕುವ ಸದುದ್ದೇಶದಿಂದ ಇಂತಹ ಯೋಚನೆ ಮಾಡಿದರು. ಇಂತಹ ಚಿಂತನೆಯೂ ಆದರ್ಶನೀಯವಲ್ಲವೇ...?

• ರೊ. ಎಂ. ಮಾಧವಾಚಾರ್

**ಆತ್ಮೀಯ ರೋಟರಿ ಮಿತ್ರರೇ, ತ್ವರಿತ ಗಮನಕ್ಕೆ**

**ಇದು ರೋಟರಿ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಭಾಗವಹಿಸಲು ಕರೆ**

2025 ಜೂನ್ 21 ರಿಂದ 25 ರವರೆಗೆ ಕೆನಡಾದ ಕ್ಯಾಲ್ಗರಿಯಲ್ಲಿ ಅಂತರಾಷ್ಟ್ರೀಯ ರೋಟರಿ ಸಮ್ಮೇಳನ ಜರುಗಲಿದೆ, ಇದರ ಬಗ್ಗೆ ಈಗಾಗಲೇ ಎಲ್ಲಾ ಮಾಹಿತಿಗಳನ್ನು ತಮಗೆ ತಿಳಿಸಿದ್ದು ಇದೇ ತಿಂಗಳು 25–10–24 ರ ಒಳಗೆ ಇದರ ಬಗ್ಗೆ ವ್ಯವಸ್ಥೆ ಮಾಡಲು ಅಂದರೆ ಪ್ರಯಾಣ ಮತ್ತು ಏರ್ ಟಿಕೆಟ್ ವೀಸಾ ಮುಂಗಡ ಕಾದಿರಿಸುವ ಬಗ್ಗೆ ತಮ್ಮ ಬರುವಿಕೆಯ ಹೆಸರುಗಳನ್ನು ಕೂಡಲೇ ತಿಳಿಸಲು ಮನವಿ ಮಾಡಿದ್ದೇವೆ. ದಯವಿಟ್ಟು ಆಸಕ್ತರು ಹೆಸರುಗಳನ್ನು ಕೂಡಲೇ ತಿಳಿಸಿ ಪಾಸ್ಪೋರ್ಟ್ ಕಾಪಿಯನ್ನು ನಮಗೆ ಕೂಡಲೇ ಕಳುಹಿಸಲು ಮತ್ತೊಮ್ಮೆ ಮನವಿ ಮಾಡುತ್ತಿದ್ದೇವೆ.


– ರೊ. ಎ.ಎಸ್. ಗುರುರಾಜ್
ಆರ್. ಐ. ಕನ್ವೆನ್ಷನ್ ಸಂಚಾಲಕರು, ಶಿವಮೊಗ್ಗ
ಮೊ. 94483 19976

## ಜನ್ಮ ದಿನದ ಶುಭಾಶಯಗಳು



Udayashankar Sastry H. D.
22nd Nov





Sunil Sastry
25th Nov.




ಬೋರ್ಡ್ ಮೀಟಿಂಗ್

## ಚಿಂತನ

- ಒಬ್ಬ ವ್ಯಕ್ತಿ ನೀಡು ಉತ್ತರದಿಂದ ಅವನು ಬುದ್ಧಿವಂತನೇ ಅಲ್ಲವೇ ಎಂದು ಹೇಳಬಹುದು.
- ಒಬ್ಬ ವ್ಯಕ್ತಿ ಕೇಳುವ ಪ್ರಶ್ನೆಗಳಿಂದ ಅವನು ವಿವೇಕಿಯೆ ಅಥವಾ ಅವಿವೇಕಿಯೆ ಎಂದು ನಿರ್ಧರಿಸಬಹುದು.
- ಒಬ್ಬ ವ್ಯಕ್ತಿ ಆಡುವ ಮಾತಿನಿಂದ ಅವನು ಸಜ್ಜನನೊ ಅಥವಾ ದುಷ್ಟನೊ ಎಂದು ನಿರ್ಧರಿಸಬಹುದು.

– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*